ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

**DIRECTORATE OF INDUSTRIES AND COMMERCE**
No.49, 1ST Floor, South Block
Khanija Bhavan, Race Course Road,
Bangalore – 560001
☎: 22386758, Fax: : 22389909

ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ
ನಂ.49, 1ನೇ ಮಹಡಿ, ಸೌತ್ ಬ್ಲಾಕ್
ಖನಿಜ ಭವನ, ರೇಸ್ ಕೋರ್ಸ ರಸ್ತೆ
ಬೆಂಗಳೂರು - 560 001
☎ :22386758 ಫ್ಯಾಕ್ಸ್: 22389909

ಸಂಖ್ಯೆ:ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/2017-18 ದಿನಾಂಕ: 28 AUG 2017

**ಅಧಿಸೂಚನೆ**

ವಿಷಯ: ಸಿವಿಲ್ ಆಪೀಲ್ ಸಂಖ್ಯೆ:2368/2011 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 09/02/2017 ರ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ: 01/01/2017 ರಲ್ಲಿದ್ದಂತೆ ಇಲಾಖೆಯ ವಿವಿಧ ವೃಂದಗಳ ಹುದ್ದೆಗಳ ವೃಂದವಾರು ಜೇಷ್ಠತೆಯನ್ನು ಪುನರಾವಲೋಕನ ಮಾಡಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್ಆರ್ಆರ್ 2011, ದಿನಾಂಕ; 06-05-2017.
2) ಸರ್ಕಾರದ ಪತ್ರ ಸಂಖ್ಯೆ:ವಾಕ್ಕೈ 55 ಸ್ಥೀಮರ 2017 ದಿನಾಂಕ 10-5-2017 ಮತ್ತು 14-07-2017.

---

**ಪ್ರಸ್ತಾವನೆ:**

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಆಪೀಲ್ ಸಂಖ್ಯೆ:2368/2011, ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09/02/2017 ರಂದು ನೀಡಿರುವ ತೀರ್ಪಿನಲ್ಲಿ Karnataka Determinataion of seniority of the Government Servants Promoted on the basis of Reservation (to the post in the civil services of the State) Act, 2002 ರ ಸೆಕ್ಷನ್ 3 ಮತ್ತು 4ನ್ನು "Ultra vires Articles 14 and 16 of the Constitution" ಎಂದು ಆದೇಶಿಸಿರುತ್ತದೆ. ಹಾಗೂ ಜೇಷ್ಠತಾಪಟ್ಟಿಯನ್ನು ಮೂರು ತಿಂಗಳೊಳಗಾಗಿ ಪರಿಷ್ಕರಿಸಲು ನಿರ್ದೇಶನ ನೀಡಿರುತ್ತದೆ.

ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಜೇಷ್ಠಾತಾ ಪಟ್ಟಿಯನ್ನು ತಯಾರಿಸುವ ಬಗ್ಗೆ ಮಾರ್ಗಸೂಚಿ ನೀಡಲಾಗಿರುತ್ತದೆ. ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನ್ವಯ ನ್ಯಾಯಾಲವು ನಿಗಧಿಪಡಿಸಿದ ಸಮಯದೊಳಗೆ ಸರ್ಕಾರದ ದಿನಾಂಕ: 06/05/2017 ರಲ್ಲಿ ನೀಡಿರುವ ಮಾರ್ಗದರ್ಶನದನ್ವಯ ಜೇಷ್ಠಾತಾ ಪಟ್ಟಿಯನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಅದರಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಹೊರಡಿಸಲು ಈ ಆದೇಶ.

**ಆದೇಶ**

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:2368/2011, ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 09/02/2017 ರಂದು ನೀಡಿರುವ ನಿರ್ದೇಶನದಂತೆ ಹಾಗೂ ಉಲ್ಲೇಖ (1) ರ ಸರ್ಕಾರದ ಆದೇಶದ ಕಂಡಿಕೆ (16) ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಈ ಕೆಳಗಿನ ವಿವಿಧ ವೃಂದದ ಅಧಿಕಾರಿ / ನೌಕರರ ಜೇಷ್ಠತಾ ಪಟ್ಟಿಯನ್ನು ಪುನರಾವಲೋಕನ ಮಾಡಿ ಬದಲಾವಣೆಗಳನ್ನು ಷರಾ ಕಲಂನಲ್ಲಿ ನಮೂದಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಅವರಿಗೆ ಲಭ್ಯವಾಗುವ ಬಡ್ತಿಯ ಅರ್ಹತಾ ದಿನಾಂಕಗಳನ್ನು ನಿಗಧಿಪಡಿಸಿ ಆದೇಶ ಹೊರಿಡಿಸಿದೆ.

1) ಸಹಾಯಕ ನಿರ್ದೇಶಕರು
2) ಕೈಗಾರಿಕಾ ಉತ್ತೇಜನಾಧಿಕಾರಿ
3) ಅಧೀಕ್ಷಕರು
4) ಕೈಗಾರಿಕಾ ವಿಸ್ತರಣಾಧಿಕಾರಿ
5) ಬೋಧಕರು
6) ಪ್ರಥಮ ದರ್ಜೆ ಸಹಾಯಕರು
7) ಶೀಘ್ರಲಿಪಿಗಾರರು
8) ದ್ವಿತೀಯ ದರ್ಜೆ ಸಹಾಯಕರು
9) ಬೆರಳಚ್ಚುಗಾರರು
10) ಸಹಾಯಕ ಬೋಧಕರು
11) ವಾಹನ ಚಾಲಕರು
12) ಗ್ರೂಪ್ ಡಿ

ಮೇಲ್ಕಂಡ ಪಟ್ಟಿಯಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 30 ದಿನದೊಳಗಾಗಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರಿಗೆ ಪೂರಕವಾದ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಿದೆ. ತದನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು,
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು

ಪ್ರತಿಗಳು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾ ನಿಯಮಗಳು-1), ವಿಧಾನಸೌಧ, ಬೆಂಗಳೂರು